**Scholarly Research Journal for Interdisciplinary Studies**
Online ISSN 2278-8808, SJIF 2025 = 8.486
Peer Reviewed & Refereed Journal, AUG-SEPT 2025, Vol- 13/86

# ಮಾನವ ಹಕ್ಕುಗಳು: ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ

**ಡಾ. ಸರಸ್ವತಿ**

*ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ, ವಿಭಾಗ, ಶ್ರೀ ಲಾಲ್ ಬಹದ್ದೂರಶಾಸ್ತ್ರಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಿಣ್ಣೂರು ಮುಖ್ಯರಸ್ತೆ, ಆರ್.ಟಿ.ನಗರ, ಬೆಂಗಳೂರು-560032. ಮೊ.7899737329.*

**Paper Received On**: 20 AUGUST 2025

**Peer Reviewed On:** 24 SEPTEMBER 2025

**Published On:** 01 OCTOBER 2025

***Abstract***

*ಮಾನವ ಬುದ್ಧಿ ಜೀವಿಯಾಗಿದ್ದು, ಆ ಕಾರಣಕ್ಕಾಗಿಯೇ ಅವನಿಂದ ಪ್ರತ್ಯೇಕಿಸಲಾಗ ದಂತಂಹ ಕೆಲವು ಹಕ್ಕುಗಳು ಅವನಿಗಿರುತ್ತವೆ. ಒಬ್ಬ ವ್ಯಕ್ತಿಯಿಂದ ಯಾರೂ ಪ್ರತ್ಯೇಕಿಸಲಾಗ ದಂತಂಹ ಹಕ್ಕುಗಳೇ ಮಾನವ ಹಕ್ಕುಗಳು. ಮಾನವ ಹಕ್ಕುಗಳು ಸಾರ್ವತ್ರಿಕ ತತ್ವಗಳಾಗಿದ್ದು, ಎಲ್ಲಾ ವ್ಯಕ್ತಿಗಳಿಗೂ ತಮ್ಮ ಸಾಮರ್ಥ್ಯವನ್ನು ಅರಿತುಕೊಳ್ಳಲು ನೆರವಾಗುತ್ತವೆ. ಈ ಹಕ್ಕುಗಳು ಎಲ್ಲಾ ಸ್ಥಳಗಳಲ್ಲೂ, ಎಲ್ಲಾ ಕಾಲದಲ್ಲೂ ಎಲ್ಲಾ ಜನರಿಗೂ ಅನ್ವಯಿಸುತ್ತವೆ.  ಅಂದರೆ, ಮಾನವ ಹಕ್ಕುಗಳು ಸರ್ಕಾರಗಳು ಪ್ರಜೆಗಳಿಗೆ ನೀಡುವ ಬಳುವಳಿ ಅಥವಾ ವರದಾನ ವಾಗಿರದೇ ಪ್ರತೀ ಪ್ರಜೆಯ ಹಕ್ಕಾಗಿದೆ. ಮಾನವ ಹಕ್ಕುಗಳು ನೀಜಕ್ಕೂ ' ಸಾರ್ವತ್ರಿಕ ' ಏಕೆಂದರೆ, ಅವು ಯಾವುದೇ ಜಾತಿ, ವರ್ಣ, ಧರ್ಮ, ಪಂಗಡ, ಪ್ರಾಂತ್ಯಗಳ ತಾರತಮ್ಯವಿಲ್ಲದೇ ಎಲ್ಲರಿಗೂ ಸಮಾನವಾಗಿ ಅನ್ವಯಿಸುತ್ತವೆ. ಮಾನವ ಹಕ್ಕುಗಳ ಕಲ್ಪನೆಯು 20ನೇ ಶತಮಾನದಲ್ಲಿ ಹೆಚ್ಚು ಪ್ರಚಲಿತವಾಗುತ್ತಿವೆ. ಹೆಚ್ಚುತ್ತಿರುವ ಪ್ರಜಾಸತ್ತಾತ್ಮಕ ಸರ್ಕಾರಗಳು ಅದಕ್ಕೆ ಸಂಬಂಧಿಸಿದಂತೆ ಮುಕ್ತತೆ ಮತ್ತು ಪಾರದರ್ಶಕತೆ ಮಾನವ ಹಕ್ಕುಗಳ ಔಚಿತ್ಯವನ್ನು ಮತ್ತಷ್ಟು ಹೆಚ್ಚಿಸಿವೆ. ಗ್ರೀಕ್ ನಾಟಕಕಾರ ಸೊಫೋಕ್ಲಸ್ ಅವರು ಸರ್ಕಾರದ ದೌರ್ಜನ್ಯದ ವಿರುದ್ಧ ವ್ಯಕ್ತಿಯ ರಕ್ಷಣೆ ಬಗ್ಗೆ ಪ್ರಸ್ತಾವ ಮಾಡಿದ್ದರು. ಪ್ಲೇಟೋ ಮತ್ತು ಅರಿಸ್ಟಾಟಲ್ ಅವರು ಸಹ ಸಾರ್ವತ್ರಿಕ ನ್ಯಾಯ ಮತ್ತು ಹಕ್ಕುಗಳ ಬಗ್ಗೆ ವಿಚಾರ ಮಾಡಿದ್ದಾರೆ.  ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು 2009ರ ಮಸೂದೆಗೆ ಸಂಸತ್ತು ಅನುಮೋದನೆ ನೀಡಿದ್ದು, ಈ ಮಸೂದೆಗೆ ರಾಷ್ಟ್ರಪತಿಯವರ ಅಂಕಿದ ನಂತರ ಶಿಕ್ಷಣವು ಮೂಲಭೂತ ಹಕ್ಕಾಗಿದೆ. ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಪ್ರತಿಯೊಬ್ಬ ಮಕ್ಕಳಿಗೆ ಕಲ್ಪಿಸಿಕೊಟ್ಟಂತಾಗುತ್ತದೆ. ಭಾರತ ದೇಶದಲ್ಲಿ ಅನೇಕ ಮತಗಳು ಇವೆ. ಅವುಗಳೆಂದರೆ ಹಿಂದೂ, ಇಸ್ಲಾಂ, ಕ್ರೈಸ್ತ, ಭೌದ್ಧ, ಸಿಖ್, ಜೈನ, ಪಾರ್ಸಿ ಮತಗಳು ಮತ್ತು ಅನೇಕ ಬುಡಕಟ್ಟುಗಳು ಒಂದೊಂದು ಜಾತಿಗಳಲ್ಲಿ ಹಲವು ಉಪ ಜಾತಿಗಳಿವೆ. ಭಾರತ ಸರ್ಕಾರದ ಅಧ್ಯಯನದ ಪ್ರಕಾರ ಭಾರತ ದೇಶದಲ್ಲಿ 4635 ವಿವಿಧ ಜಾತಿಗಳು ಉಪ ಜಾತಿಗಳಿವೆ.*

***Keywords**: ಮಾನವ ಹಕ್ಕುಗಳು, ಶಿಕ್ಷಣ, ಸಾಮಾಜಿಕ ನ್ಯಾಯ, ಸ್ವಾತಂತ್ರ್ಯ, ಸಮಾನತೆ, ಧರ್ಮ.*

*Copyright © 2025, Scholarly Research Journal for Interdisciplinary Studies*

**ಮಾನವ ಹಕ್ಕುಗಳ ಪ್ರಾಮುಖ್ಯತೆ**

ಆಧುನೀಕ ಪ್ರಜಾಪ್ರಭುತ್ವಗಳು ಮಾನವ ಹಕ್ಕುಗಳ ಸ್ಥಾನ ಮತ್ತು ಪ್ರಾಮುಖ್ಯತೆಯನ್ನು ಗುರುತಿಸಿ, ತಮ್ಮ ತಮ್ಮ ಸಂವಿಧಾನದಲ್ಲಿ ಮಾನವ ಹಕ್ಕುಗಳಿಗೆ ಪ್ರತ್ಯೇಕವಾದ ಸ್ಥಾನವನ್ನು ನೀಡಿವೆ. ಅದೇ ರೀತಿ, ಮಾನವ ಹಕ್ಕುಗಳು ಹಾಗೂ ವ್ಯಕ್ತಿಯ ಗೌರವ, ಘನತೆಗಳು ಅಂತರಾಷ್ಟ್ರೀಯ ಮಟ್ಟದಲ್ಲೂ ಗುರುತಿಸಲ್ಪಟ್ಟಿದ್ದು, ವಿಶ್ವಸಂಸ್ಥೆ ಮತ್ತು ಅದರ ಅಂಗ ಸಂಸ್ಥೆಗಳು ಜಾರಿಗೆ ತಂದಿರುವ ಕಾನೂನುಗಳೇ ಅದಕ್ಕೆ ನಿದರ್ಶನವಾಗಿವೆ. ವ್ಯಕ್ತಿ ಗೌರವ, ವೈಯಕ್ತಿಕ ಬೆಳವಣಿಗೆ, ಅಲ್ಪಸಂಖ್ಯಾತರಿಗೆ ರಕ್ಷಣೆ, ಸರ್ಕಾರದ ಮೇಲೆ ನಿಯಂತ್ರಣ ಹಲವಾರು ಅಂಶಗಳಿಗೆ ಪ್ರಮುಖ ಕಾರಣವಾಗಿವೆ.

**ಮಾನವ ಹಕ್ಕುಗಳ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಪ್ರಮುಖ ಅಂಶಗಳು**

ವಿಶ್ವದಲ್ಲಿ ಅನೇಕ ಯುದ್ಧಗಳು ನಡೆದಿವೆ. ಅಂದರೆ 20ನೇ ಶತಮಾನದಲ್ಲಿ ಮೊದಲನೇಯ ಮಹಾಯುದ್ಧವು 1914 ರಿಂದ 1918 ವರೆಗೆ ನಡೆಯಿತು. ಈ ಯುದ್ಧದಲ್ಲಿ ಅಪಾರವಾದ ಪ್ರಾಣ ಹಾನಿ ಮತ್ತು ಆಸ್ತಿ ಹಾನಿ ಸಂಭವಿಸಿತು. ಇದರಿಂದ ಪಾಠ ಕಲಿತ ನಂತರ ಇನ್ನು ಮುಂದೆ ವಿಶ್ವದಲ್ಲಿ ಯುದ್ಧಗಳು ನಡೆಯದಂತೆ ತಡೆಯಲು ವಿಶ್ವಶಾಂತಿಯನ್ನು ಸ್ಥಾಪಿಸಲು ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಶಾಂತ ರೀತಿಯಲ್ಲಿ ಬಗೆಹರಿಸುವ ಉದ್ದೇಶದಿಂದ ಲೀಗ್ ಆಫ್ ನೇಷನ್ಸ್ ಸ್ಥಾಪನೆಗೆ ನಾಂದಿಯಾಯಿತು. ಕೆಲವು ವರ್ಷಗಳ ನಂತರ ಸದಸ್ಯ ರಾಷ್ಟ್ರಗಳ ಅಸಹಕಾರ, ದ್ವೇಷ, ಸಂಶಯ, ಭೀತಿ, ಶಸ್ತ್ರಾಸ್ತ್ರಗಳ ಪೈಪೋಟಿ ಹಾಗೂ ಸರ್ವಾಧಿಕಾರಿಗಳ ಏಳಿಗೆ ಮಾನವ ದೌರ್ಬಲ್ಯಗಳು ಎರಡನೇ ಮಹಾಯುದ್ಧಕ್ಕೆ ದಾರಿ ಮಾಡಿಕೊಟ್ಟವು. ಎರಡನೇ ಮಹಾಯುದ್ಧವು 1939 ರಿಂದ 1945 ವರೆಗೆ ನಡೆಯಿತು. ಈ ಯುದ್ಧದಲ್ಲಿ ಜಗತ್ತಿನ ಎಲ್ಲಾ ರಾಷ್ಟ್ರಗಳು ನೇರವಾಗಿ ಅಥವಾ ಪರೋಕ್ಷವಾಗಿ ಭಾಗವಹಿಸಿದ್ದವು. ಸುಮಾರು ಎರಡು ಕೋಟಿ ಸೈನಿಕರು ನಾಲ್ಕು ಕೋಟಿ ನಾಗರೀಕರು ಮರಣ ಹೊಂದಿದ್ದರು. ಸುಮಾರು ಎರಡುವರೆ ಕೋಟಿ ಜನ ಗಾಯಗೊಂಡರು. ಈ ಹಿಂದೆ ಎಂದೂ ಕಾಣದಂತಹ ಭೀಮಕರ ನರಹತ್ಯೆ, ಆರ್ಥಿಕ ದುಂದುವೆಚ್ಚ, ಅವ್ಯವಸ್ಥೆ ಮತ್ತು ಅರಾಜಕತೆ ಜಗತ್ತನೇ ಮುಳುಗಿಸಿತು. ಇದರಿಂದ ಉಂಟಾದ ದುಷ್ಪರಿಣಾಮಗಳು ಜಗತ್ತಿನ ಜನರನ್ನು ದಂಗುಬಡಿಸಿ, ಮತ್ತೊಂದು ಯುದ್ಧ ನಡೆದರೆ ಇಡೀ ಜಗತ್ತೇ ನಾಶವಾಗುತ್ತದೆ ಎಂಬ ಕಟುಸತ್ಯದ ಅರಿವು ಮೂಡಿಸಿತು. ಇದರ ಪರಿಣಾಮವಾಗಿ ' ಲೀಗ್ ಆಫ್ ನೇಷನ್ಸ್ ' ಸ್ಥಾನದಲ್ಲಿ 1945ರಲ್ಲಿ 'ವಿಶ್ವಸಂಸ್ಥೆ' ಸ್ಥಾಪನೆಯಾಯಿತು.

ಮಾನವ ಹಕ್ಕುಗಳನ್ನು ಪ್ರೋತ್ಸಾಹಿಸುವುದು ಮತ್ತು ಅವುಗಳನ್ನು ವಿಶ್ವದಾದ್ಯಂತ ವಿಸ್ತರಿಸುವುದು ವಿಶ್ವಸಂಸ್ಥೆಯ ಮುಖ್ಯ ಉದ್ದೇಶಗಳಲ್ಲಿ ಒಂದು ಹೀಗಾಗಿ ವಿಶ್ವಸಂಸ್ಥೆ 1948

*Copyright © 2025, Scholarly Research Journal for Interdisciplinary Studies*

ರಲ್ಲಿ ಮಾನವ ಹಕ್ಕುಗಳನ್ನು ಘೋಷಣೆ ಮಾಡಲಾಯಿತು. ಈ ಘೋಷಣೆ ಪ್ರಕಾರ ಈ ಕೆಳಗಿನ ಹಕ್ಕುಗಳು ಈ ರೀತಿಯಾಗಿವೆ.

- ಜಗತ್ತಿನ ಎಲ್ಲಾ ಜನರು ಸಮಾನರು ಧರ್ಮ, ಜಾತಿ, ಲಿಂಗ, ವರ್ಗ, ಆಧಾರದ ಮೇಲೆ ತಾರತಮ್ಯ ತೋರಬಾರದು.
- ಜೀವಿಸುವ, ಸ್ವಾತಂತ್ರವಾಗಿರುವ, ವೈಯಕ್ತಿಕ ಭದ್ರತೆ ಪಡೆಯುವ, ಗುಲಾಮಗಿರಿ ಯಿಂದ ವಿಮೋಚನೆ, ಚಿತ್ರಹಿಂಸೆ ಮತ್ತು ಕ್ರೌರ್ಯಕ್ಕೆ ಒಳಪಡದಿರುವ ಹಕ್ಕು.
- ಕಾನೂನಿನ ದೃಷ್ಟಿಯಲ್ಲಿ ಒಬ್ಬ ವ್ಯಕ್ತಿಯಾಗಿ ಗುರುತಿಸಿಕೊಳ್ಳುವ, ಕಾನೂನಿನ ದೃಷ್ಟಿಯಲ್ಲಿ ಸಮಾನತೆ, ವಿಚಾರಣೆಯ ಹಕ್ಕು ನೀಡಲಾಗಿದೆ.
- ಇಚ್ಛಾನುಸಾರ ಬಂಧಿಸಿಡುವ ಅಥವಾ ಗಡಿಪಾರು ಮಾಡದಿರುವ, ನ್ಯಾಯ ಯುತವಾದ ಸಾರ್ವಜನಿಕ ವಿಚಾರಣಾ ಹಕ್ಕನ್ನು ನೀಡಲಾಗಿದೆ.
- ದೇಶದಲ್ಲಿ ಮತ್ತು ವಿದೇಶಗಳಲ್ಲಿ ಸಂಚರಿಸುವ, ಇತರ ದೇಶಗಳಲ್ಲಿ ಆಶ್ರಯ ಪಡೆಯುವ, ಒಂದು ರಾಷ್ಟ್ರದ ಪೌರತ್ವವನ್ನು ಪಡೆಯುವ ಅಥವಾ ಬದಲಾಯಿಸಿಕೊಳ್ಳುವ ಹಕ್ಕು.
- .ಮದುವೆ ಮಾಡಿಕೊಂಡು ಸಂಸಾರ ಮಾಡುವ, ಖಾಸಗಿ ಆಸ್ತಿಯನ್ನು ಹೊಂದುವ, ಧಾರ್ಮಿಕ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರಯದ ಹಕ್ಕು.
- ಶಾಂತಿಯುತವಾಗಿ ಸಭೆ ಸೇರುವ, ಸರ್ಕಾರದ ಕಾರ್ಯದಲ್ಲಿ ಮತ್ತು ಚುನಾವಣೆ ಗಳಲ್ಲಿ ಭಾಗವಹಿಸುವ ಹಕ್ಕು.
- ವಿಶ್ರಾಂತಿ ಪಡೆಯುವ, ಜೀವನದ ಕನಿಷ್ಠ ಅವಶ್ಯಕತೆಗಳನ್ನು ಹೊಂದುವ ಶಿಕ್ಷಣದ, ಸಾಂಸ್ಕೃತಿಕ ಜೀವನದಲ್ಲಿ ಪಾಲ್ಗೊಳ್ಳುವ ಹಕ್ಕು.

6 ರಿಂದ 14 ವರ್ಷದ ವಯೋಮಾನದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಅವಕಾಶ ಕಲ್ಪಿಸುವ ಈ ಶಿಕ್ಷಣದ ಮಸೂದೆಯು ಆಗಸ್ಟ್ 4, 2009 ರಂದು ಲೋಕಸಭೆಯಲ್ಲಿ ಧ್ವನಿ ಮತದಿಂದ ಅಂಗೀಕಾರವಾದರೆ, ರಾಜ್ಯಸಭೆಯಲ್ಲಿ ಜುಲೈ 20 ರಂದೇ ಅಂಗೀಕಾರವಾಗಿತ್ತು. ಈ ಮಸೂದೆ ಸಿದ್ಧಪಡಿಸುವಲ್ಲಿ ಡಿಸೆಂಬರ್ 2002 ರಿಂದ ಆರಂಭವಾಗಿ ಈವರೆಗೆ ಆರುವರೆ ವರ್ಷಗಳ ಪ್ರಯತ್ನ ಒಂದು ರೀತಿಯ ಸರ್ಕಾರದ ಶ್ರಮವಾಗಿದೆ. ಈ ಅವಧಿಯಲ್ಲಿ ಎರಡು ಸರ್ಕಾರಗಳು 6ಕ್ಕಿಂತ ಹೆಚ್ಚು ಕರಡುಗಳನ್ನು ಸಿದ್ಧಗೊಳಿಸಿದ್ದು, ಶಾಸನದ ಮಸೂದೆ ಅಂಗೀಕಾರವಿಲ್ಲದೇ ಮೂಲಭೂತ ಹಕ್ಕಾಗಿ ಪ್ರಕಟಿಸಲಾಗಿರಲಿಲ್ಲ. ಈ ಮೂಲಭೂತ ಹಕ್ಕಿನಿಂದಾಗಿ 6 ರಿಂದ 14 ವರ್ಷದ ವರೆಗಿನ ಮಕ್ಕಳು ಉಚಿತ ಕಡ್ಡಾಯ ಶಿಕ್ಷಣವನ್ನು ನೀಡಬೇಕು ಎಂಬ ಆಶಯವು ಈ ಕಾಯ್ದೆಯದ್ದಾಗಿದೆ.

*Copyright © 2025, Scholarly Research Journal for Interdisciplinary Studies*

ಭಾರತ ದೇಶದ ಬಹುತೇಕ ಸಮಸ್ಯೆಗಳಿಗೆ ಶಿಕ್ಷಣವೇ ಪರಿಹಾರವಾಗಿದ್ದು, ಪ್ರತಿಯೊಂದು ಮಗುವಿಗು ಉಚಿತ ಮತ್ತು ಕಡ್ಡಾಯ ಶಿಕ್ಷಣದಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಈ ದಿಶೆಯಲ್ಲಿ ಉಚಿತ ಶಿಕ್ಷಣ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಮಸೂದೆಗೆ ಸಂಸತ್ತು ಅಂಗೀಕಾರ ನೀಡಿರುವುದು ಕ್ರಾಂತೀಕಾರಕ ಹಾಗೂ ಐತಿಹಾಸಿಕ ಹೆಜ್ಜೆಯಾಗಿದೆ. ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕೊಡುವುದು ನಾಗರೀಕ ಸರ್ಕಾರೊಂದರ ಕರ್ತವ್ಯವಾಗಿದ್ದು, ಈ ಕುರಿತು ಸಂವಿಧಾನದ ರಾಜ್ಯನೀತಿ ನಿರ್ದೇಶನ ತತ್ವಗಳಲ್ಲಿಯೇ ಉಲ್ಲೇಖಿಸಲಾಗಿದೆ. 2002ರಲ್ಲಿಯೇ ಸಿದ್ದಗೊಂಡ ಕರಡು ಮಸೂದೆಗೆ 2009ರಲ್ಲಿ ಸಂಸತ್ತು ಅನುಮೋದನೆ ನೀಡುವ ಮೂಲಕ ಸಂವಿಧಾನ ಬದ್ಧ ಮೂಲಭೂತ ಹಕ್ಕಾಗಿ ಮಾರ್ಪಾಡಾಗಿರುವುದು ಭಾರತದ ಸಮಸ್ಯೆಗಳ ಪರಿಹಾರದ ದಿಕ್ಕಿಗೊಂದು ದಿಕ್ಸೂಚಿಯಾಗಿದೆ.

ಭಾರತ ದೇಶದಲ್ಲಿ ರಾಜಕೀಯ ಅಸಮಾನತೆ, ಆರ್ಥಿಕ ಅಸಮಾನತೆ, ಸಾಮಾಜಿಕ ಅಸಮಾನತೆ ಮತ್ತು ಸಂಸ್ಕೃತಕ ಅಸಮಾನತೆ ಮೇಲು ಜಾತಿಗಳು, ಮೇಲ್ವರ್ಗಗಳು, ಕೆಳಜಾತಿಗಳು, ಕೆಳವರ್ಗಗಳು, ಕೇವಲ ಶ್ರಮವಿಭಜನೆಯಾಗಿರದೇ ಶ್ರಮೀಕರ ವಿಭಜನೆ ಆಗಿದೆ. ಅತೀ ಹೆಚ್ಚು ಅವಿಧ್ಯಾವಂತರು, ನಿರುದ್ಯೋಗಿಗಳು, ಬಡವರು, ವಸತಿ ಹೀನರು ಅತೀ ಹೆಚ್ಚು ಕಾಣುವುದು ಕೆಳಜಾತಿಯ ಜನರಲ್ಲಿ ಜಾತಿ ಮತ್ತು ವರ್ಗ ಬೇರು ಹೋಗಿರುವ ಒಂದು ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ನಮ್ಮಲ್ಲಿ ಕಾಣುತ್ತೇವೆ. ಜಾತಿ ಪದ್ದತಿ ಸಾಮಾಜಿಕ ಚಟುವಟಿಕೆಯನ್ನು ನಿಷೇಧಿಸಿದೆ. ಹಿಂದೂಗಳು ಒಗ್ಗಾಟ್ಟಾಗಿ ಬಾಳುವುದನ್ನು ಜಾತಿ ಪದ್ದತಿ ತಪ್ಪಿಸಿತ್ತು.  ಜಾತಿ ಪದ್ದತಿ ಎಂಬ ಸಮಾಜ ವಿರೋಧಿ ಅಂಶವು ಸಮಾಜವನ್ನು ಒಡೆದು ಹಾಕಿದ್ದು, ಮಾತ್ರವಲ್ಲದೇ ಒಡೆದುಹೋದ ಗುಂಪುಗಳು, ತಮಗಾಗಿ ತಮ್ಮ ಸ್ವಾರ್ಥಕ್ಕಾಗಿ ಸದಾ ಕಾದಾಡುವಂತೆ ಮಾಡಿದೆ.  ಒಂದು ಗುಂಪನ್ನು ತುಳಿಯುವ ಮೂಲಕ ಮತ್ತೊಂದು ಗುಂಪು ಅಸ್ತಿತ್ವದಲ್ಲಿರಲು ಪ್ರಯತ್ನಿಸಿದೆ.  ಅಷ್ಟೇ ಅಲ್ಲ ಜಾತಿ ಮತ್ತು ಜಾತಿ ಪ್ರಜ್ಞೆಯು ಸಮಾಜದ ಐಕ್ಯತೆಯನ್ನು ಅಸಾಧ್ಯವಾಗಿಸಿದೆ.

ಜಾತಿ ಪದ್ದತಿಯು ಆರ್ಥಿಕ ಸಂಘಟನೆಯಾಗಿ ಬಹುಹಾನಿಕಾರಕ ವ್ಯವಸ್ಥೆಯಾಗಿ, ಮಾರ್ಪಾಡಾಗಿ ಮಾನವ ಸಹಜಶಕ್ತಿ ಮತ್ತು ಪ್ರತಿಭೆಗಳನ್ನು ಹತ್ತಿಕ್ಕಿ ಸಮಾಜ ಹೊರೆಸುವ ವೃತ್ತಿಯನ್ನು ಒಪ್ಪಿಕೊಳ್ಳುವುದರಿಂದ, ವ್ಯಕ್ತಿಯ ಬುದ್ದಿ ಕುಂಠಿತವಾಗಿ ಕಾಲಕ್ರಮೇಣ ನಿರುಪಯುಕ್ತ ಆಗಿಬಿಟ್ಟನು. ಹೊರಗಿನವರ ಆಕ್ರಮಣವನ್ನು ತಡೆಯುವ ಸಾಮರ್ಥ್ಯವಿದ್ದರೂ ತಡೆಯಲಾಗಲಿಲ್ಲ. ಏಕೆಂದರೆ, ಕ್ಷತ್ರಿಯರು ಮಾತ್ರ ಯುದ್ಧ ಮಾಡುತ್ತಿದ್ದರು.  ಇತರೇ ಜಾತಿ ಜನರನ್ನು ಯುದ್ದ ಮಾಡುವ ಪ್ರಕ್ರಿಯೆಯಲ್ಲಿ ತೊಡಗಸಲೇ

Copyright © 2025, Scholarly Research Journal for Interdisciplinary Studies

ಇಲ್ಲ. ಅಸಮಾನತೆ ವಿರುದ್ಧ ಮತ್ತು ಸಾಮಾಜಿಕ ನ್ಯಾಯಕ್ಕಾಗಿ, ಶಾಂತಿಗಾಗಿ ಮತ್ತು ಪ್ರೀತಿಗಾಗಿ ಮೊದಲು ಪ್ರತಿಪಾದಿಸಿದವರು ಗೌತಮ ಬುದ್ಧ, ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ಬುದ್ಧನ ವಿಚಾರಳೆಂದರೆ.

- ಆಸ್ತಿಯ ಖಾಸಗಿ ಒಡೆತನ ಒಂದು ವರ್ಗಕ್ಕೆ ಶಕ್ತಿಯನ್ನು ಮತ್ತೊಂದು ವರ್ಗಕ್ಕೆ ದು:ಖವನ್ನು ತರುತ್ತದೆ.
- ಸಮಾಜದ ಒಳಿತಿಗಾಗಿ ಈ ದು:ಖದ ಮೂಲ ಕಾರಣವಾದ ಖಾಸಗಿ ಆಸ್ತಿಯನ್ನೇ ಇಲ್ಲವಾಗಿಸಬೇಕು.
- ಎಲ್ಲಾ ಮಾನವರು ಸಮಾನರು.
- ಹುಟ್ಟಿನಿಂದ ಮನುಷ್ಯ ದೊಡ್ಡವನಾಗುವುದಿಲ್ಲ. ಗುಣದಿಂದ ದೊಡ್ಡವ ನಾಗುತ್ತಾನೆ.
- ಒಳ್ಳೇಯ ವಂಶದ ಹುಟ್ಟು ಮುಖ್ಯವಲ್ಲ. ಉನ್ನತ ಆದರ್ಶಗಳು ಮುಖ್ಯ.
- ಎಲ್ಲರ ಬಗೆಗೆ ಮೈತ್ರಿಯೇ ಮುಖ್ಯ. ಶತ್ರುವಿಗೂ ಅದು ಸಲ್ಲಬೇಕು.
- ಪ್ರತಿಯೊಬ್ಬನಿಗೂ ಕಲಿಯುವ ಹಕ್ಕಿದೆ. ಜ್ಞಾನವೆನ್ನುವುದು ಅನ್ನದಷ್ಟೇ ಮುಖ್ಯ.

12ನೇ ಶತಮಾನದ ಬಸವಾದಿ ಶರಣರು ರಚಿಸಿದ ವಚನಗಳ ಅಂತೀಮ ಗುರಿ ಜಾತಿ ಭೇದವಿಲ್ಲದ ಲಿಂಗಭೇದವಿಲ್ಲದ ವರ್ಗಭೇದವಿಲ್ಲದ ಒಂದು ಸಮ ಸಮಾಜದ ನಿರ್ಮಾಣ. ಬಸವಣ್ಣನವರು ಅಸ್ಪೃಶ್ಯತೆ ಮತ್ತು ಜಾತಿ ಭೇದವನ್ನು ಸಂಪೂರ್ಣವಾಗಿ ತೀರಸ್ಕರಿಸಿದರು. ಮಾನವ ಜಾತಿ ಒಂದೇ ಎಂಬ ಸಂದೇಶವನ್ನು ಬಸವಣ್ಣನವರು ಸಾರಿದರು. ಕಾಯಕ ಮಾಡಿದವರು ಕೈಲಾಸಕ್ಕೆ ಹೋಗಬಹುದೆಂಬ ಸಂದೇಶವನ್ನು ಜಗತ್ತಿನ ಎಲ್ಲಾ ದಾರ್ಶನಿಕರು ನೀಡಿದ್ದಾರೆ. ಆದರೆ, ಬಸವಣ್ಣನವರು ಈ ಸಂದೇಶಕ್ಕೆ ಹೊಸ ತಾತ್ಪರ್ಯವನ್ನು ಬರೆದು, ಕಾಯಕವೇ ಕೈಲಾಸವೆಂದರು. ಕಾಯಕ ಕೇವಲ ತನಗಾಗಿ ಅಲ್ಲ, ಅದು ಸಮಾಜಕ್ಕಾಗಿ, ಜನತೆಗಾಗಿ ಎಂದಿದ್ದಾರೆ.

ಸಾಮಾಜಿಕ ನ್ಯಾಯವೆಂದರೆ, ಸಮಾಜದಲ್ಲಿರುವ ಅಸಮಾನತೆಯನ್ನು ಹೊಗಲಾಡಿಸಿ, ಹಿಂದುಳಿದವರ, ಬಡವರ, ದುರ್ಬಲರ, ತುಳಿತಕ್ಕೆ ಶೋಷಣೆಗೆ ಒಳಪಟ್ಟ ಅಸಹಾಯಕರನ್ನು ರಾಜಕೀಯವಾಗಿ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮೇಲಕ್ಕೆ ಎತ್ತಲು ಶಾಸನಗಳನ್ನು ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ರೂಪಿಸಿ, ಅವುಗಳನ್ನು ಜಾರಿಗೊಳಿಸಿದರು. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯವರು ವಿಕಲಚೇತನರು, ವೃದ್ಧರು, ಬಡವರು, ಇತ್ಯಾದಿ ಜನವಿಭಾಗದ ಬದುಕು ಸ್ವಲ್ಪ ಮಟ್ಟಿಗೆ ಸುಧಾರಣೆಯಾಗಿದೆ. ಶಾಸಕಾಂಗದಲ್ಲಿ, ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಮೀಸಲಾತಿ ಸಾಮಾಜಿಕ ನ್ಯಾಯದ ಒಂದು ಭಾಗವಾಗಿದೆ. ಎಲ್ಲ ರೀತಿಯ ಅಸಮಾನತೆಯನ್ನು ಹೋಗಲಾಡಿಸಿ, ಸಮಾನತೆಯನ್ನು

*Copyright © 2025, Scholarly Research Journal for Interdisciplinary Studies*

ತರುವುದೇ ಸಾಮಾಜಿಕ ನ್ಯಾಯದ ಗುರಿಯಾಗಿದೆ. ದುಡಿಮೆಗೆ ಸಮಾನವಾದ ಪ್ರತಿಫಲ, ರಕ್ಷಣೆ ಮತ್ತು ಜನರ ಕನಿಷ್ಠ ಅಗತ್ಯತೆಗಳನ್ನು ಪೂರೈಸುವುದು ಸಹ ಸಾಮಾಜಿಕ ನ್ಯಾಯವಾಗಿದೆ. ಸಾಮಾಜಿಕ ನ್ಯಾಯವನ್ನು ಒದಗಿಸುವುದು ಕೇವಲ ಸರ್ಕಾರದ ಕೆಲಸ ಮಾತ್ರವಲ್ಲ. ಖಾಸಗಿ ಕ್ಷೇತ್ರ ಮತ್ತು ಇಡೀ ಸಮಾಜದ ಜವಾಬ್ದಾರಿಯು ಸಹ ಆಗಿದೆ.

**ಉಪಸಂಹಾರ:**

ವಿಶ್ವದ ಬೇರೆ ಬೇರೆ ಜಾತಿಗಳ, ಪಂಗಡಗಳ ಜನರಲ್ಲಿ ಮೇಲು-ಕೀಳು ಎಂಬ ಭಾವನೆ ಅನಾದಿ ಕಾಲದಿಂದಲೂ ಬೇರೂರಿ ಬಿಟ್ಟಿದೆ. ಈ ಭಾವನೆ ಹೋಗಲಾಡಿಸಬೇಕಾದರೆ, ಸಮಾಜ ಸುಧಾರಕರ ವಿಚಾರಗಳು, ವೈಜ್ಞಾನಿಕ ಆಲೋಚನೆ ವಿಶ್ವದಾದ್ಯಂತ ಮಾನವ ಹಕ್ಕುಗಳಿಗೆ ಸ್ಫೂರ್ತಿಯಾಗಬೇಕು. ಮೂಲಭೂತ ಹಕ್ಕುಗಳು ಎಲ್ಲರಿಗೂ ದೊರೆಯುವಂತಾಗಬೇಕಾದರೆ, ನಮ್ಮ ಸಂವಿಧಾನದಲ್ಲಿ ಮಾನವ ಹಕ್ಕುಗಳಿಗೆ ವಿಶೇಷವಾದ ಪ್ರಾತಿನಿಧ್ಯ ಸಿಕ್ಕಿ ಭಾರತವು ತನ್ನ ಸಾಮಾಜಿಕ ಪರಿವರ್ತನೆಗೆ ಕಾನೂನಿನ ಹಲವು ಆಯಾಮಗಳನ್ನು ಕಾರ್ಯರೂಪದಲ್ಲಿ ಬರಬೇಕಾಗಿದೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅಭಿವೃದ್ಧಿಯ ಜೊತೆಗೆ ಜನರ ಜೀವನ ಮಟ್ಟವನ್ನು ಹೆಚ್ಚಿಸಬೇಕಾಗಿದೆ. ಮಾನವೀಯತೆಯನ್ನೊಳಗೊಂಡ ಅಭಿವೃದ್ಧಿ ಬೇಕಾಗಿದೆ. ರಾಷ್ಟ್ರಕವಿ ಕುವೆಂಪು ರವರು ಹೇಳಿದ '' ಸರ್ವರಿಗೂ ಸಮಪಾಲು – ಸರ್ವರಿಗೂ ಸಮಬಾಳು '' ನನಸಾದಾಗ ಮಾನವ ಹಕ್ಕುಗಳ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಕ್ಕೆ ಜಯಸಿಗುವುದು.

**ಪರಾಮರ್ಶನ ಗ್ರಂಥಗಳು:**


1) *ಡಾ.ಸುರೇಶ್ ಎಂ.ಎನ್. ಮತ್ತು ಡಾ. ಪೂರ್ಣಿಮಾ ಜಿ.ಆರ್.(2022). ಮಾನವ ಹಕ್ಕುಗಳು ಸಪ್ನ ಬುಕ್ ಹೌಸ್ (ಪ್ರ.) Ltd. ಬೆಂಗಳೂರು. ಪು. ಸಂ: 1-3.*
2) *ನ್ಯಾಯಮೂರ್ತಿ ಶ್ರೀ ಹೆಚ್.ಎನ್.ನಾಗಮೋಹನದಾಸ್ (2021) ಮಾನವ ಹಕ್ಕುಗಳು, ಜನಪ್ರಕಾಶನ್, ಬೆಂಗಳೂರು. ಪು.ಸಂ.9-22.*
3) *ಡಾ.ಕೆ.ಜಿ.ಸುರೇಶ್, (2010), ಭಾರತ ಸರ್ಕಾರ ಮತ್ತು ರಾಜಕೀಯ, ಚೇತನ್ ಬುಕ್ ಹೌಸ್, ಮೈಸೂರು. ಪು.ಸಂ.125-128.*


*Copyright © 2025, Scholarly Research Journal for Interdisciplinary Studies*